ಕೇಂದ್ರ ಸರಕಾರದ ಮುಂದೆ ಇರತಕ್ಕಂತಹ ಒಂದು ಬೇಡಿಕೆ. ಲೋಕಸಭೆ ಈ ಕೆಲಸ ಮಾಡುತ್ತದೆ. ಆದ್ದರಿಂದ ಮಹಾರಾಷ್ಟ್ರ ಏಕೀಕರಣ ಸಮಿತಿಯವರು, don't have any extra-territorial loyalty. ಇದನ್ನು ಇಟ್ಟುಕೊಳ್ಳಲಿಕ್ಕೆ ಹೋಗಬೇಡಿ. ನಿಮಗೆ ಓಟು ಕೊಡತಕ್ಕಂತಹ ಜನ ಮಹಾರಾಷ್ಟ್ರದವರು ಅಲ್ಲ. ನಿಮಗೆ ಓಟು ಕೊಡುವವರು ಕರ್ನಾಟಕದ ಕನ್ನಡ ನಾಡಿನವರು. You should be loyal to Karnataka, not to Maharashtra. ಆ ಕೆಲಸ ಮಾಡಲಿಕ್ಕೆ ಹೋಗಬೇಡಿ. ತಾವುಗಳು ಕರ್ನಾಟಕ ರಾಜ್ಯದ ವಿಧಾನ ಸಭಾ ಸದಸ್ಯರಾಗಿ ಪ್ರಮಾಣವಚನವನ್ನು ತೆಗೆದುಕೊಂಡಿದ್ದೀರಿ. ಆದ್ದರಿಂದ ಕರ್ನಾಟಕ ರಾಜ್ಯದ ವಿಧಾನ ಸಭಾ ಸದಸ್ಯರಾಗಿ ತಾವು ನಡೆದುಕೊಳ್ಳಬೇಕು.

(ಈ ಹಂತದಲ್ಲಿ ಶ್ರೀ ವಾಟಾಳ್ ನಾಗರಾಜ್ ಅವರು ಮಹಾರಾಷ್ಟ್ರ ಏಕೀಕರಣ ಸಮಿತಿಗೆ ಧಿಕ್ಕಾರವೆಂದು ಕೂಗಿದರು.)

(ಬೆಳಗಾಂ ಜಿಲ್ಲೆಯ ಕೆಲವು ಸ್ವತಂತ್ರ ಸದಸ್ಯರುಗಳು ಇದನ್ನು ಪ್ರತಿಭಟಿಸಿ ವಾಕೌಟ್ ಮಾಡಿದರು.)

ಶ್ರೀ ವೀರಪ್ಪ ಮೊಯಿಲಿ : ದಯಮಾಡಿ ರಾಷ್ಟ್ರ ನಾಯಕರಾದ ಶಿವಾಜಿ ಮಹಾರಾಜರ ಹೆಸರನ್ನು ನಿಮ್ಮ ಸ್ವಾರ್ಥಕ್ಕಾಗಿ ಉಪಯೋಗ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಅವರು ರಾಷ್ಟ್ರದ ನಾಯಕರು. ಮಹಾರಾಷ್ಟ್ರದ ನಾಯಕರೆಂದು ತಿಳಿದುಕೊಳ್ಳಬೇಡಿ. ಅವರ ಹೆಸರಿಗೆ ಅಪಚಾರ ಮಾಡಬೇಡಿ. ಕೇಂದ್ರ ಗೃಹ ಸಚಿವರು ಈ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ. ಎಲ್ಲಾ ರಾಜ್ಯದ ಕೆಲವು ಜಿಲ್ಲೆಗಳನ್ನು ಸೇರಿಸಿ ಒಂದು ಹೊಸ ರಾಜ್ಯವನ್ನು ಮಾಡಿ ಎಂದು ಹೇಳಿದ್ದಕ್ಕೆ ಸ್ಪಷ್ಟವಾಗಿ ಇದು ಸಾಧ್ಯವೇ ಇಲ್ಲವೆಂದು ಕೇಂದ್ರ ಸರಕಾರದ ಮಂತ್ರಿಗಳಾದ ಶ್ರೀ ರಾಜೇಶ್ ಪೈಲಟ್ ಅವರು ತಳ್ಳಿ ಹಾಕಿದ್ದಾರೆ. ತಾವು ಹೇಳಿದಂತಹ ಪ್ರಸ್ತಾಪ ಇಲ್ಲ. ಈ ಬಗ್ಗೆ ಮಾತುಕತೆ ಮಾಡಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಈ ವಿಧಾನ ಮಂಡಲದಲ್ಲಿ ಏನು ಮಾತುಕತೆ, ನಿರ್ಣಯವಾಗಿದೆ ಅದಕ್ಕೆ ನಾವೆಲ್ಲರೂ ಬದ್ಧರಾಗಿರಬೇಕಾಗುತ್ತದೆ. ಮಹಾಜನ ಸಮಿತಿ ವರದಿ ಶಿಫಾರಸ್ಸು ಮಾಡಬೇಕು ಇದಕ್ಕೆ ಸೀಮಿತವಾದ ಮಾತುಕತೆಯೇ ಹೊರತು ಅದಕ್ಕಿಂತ ಹೊರತಾದ ವಿಚಾರಕ್ಕೆ ಕರ್ನಾಟಕ ಸರಕಾರ ಬೇರೆ ಮಾತುಕತೆಗೆ ಸಿದ್ಧವಿಲ್ಲ. ಇಷ್ಟನ್ನು ಮಾತ್ರ ಹೇಳುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಇಷ್ಟೆಲ್ಲಾ ಹೇಳುತ್ತಿದ್ದೀರಿ. ಮಾನ್ಯ ವಿರೋಧ ಪಕ್ಷದ ಸದಸ್ಯರು ಹೇಳಿದಂತೆ ಸರ್ವ ಪಕ್ಷಗಳ ನಿಯೋಗವನ್ನು ತೆಗೆದುಕೊಂಡು ಹೋಗುತ್ತಿದ್ದೀರಾ? ನಿಮ್ಮ ರಾಜ್ಯದ ವತಿಯಿಂದ ನಿಯೋಗವನ್ನು ತೆಗೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುತ್ತೀರಾ?

SRI R.V. DESHAPANDE : How are you going to counter it? That is our worry.

ಶ್ರೀ ವಾಟಾಳ್ ನಾಗರಾಜ್ : ಈ ಸದನದಲ್ಲಿ ತಾವು ಉತ್ತರ ಹೇಳುತ್ತಿದ್ದೀರಿ. ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೇನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಅನಿಸಿಕೆಗಳನ್ನು ಇಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಮುಂದೆ ಬರತಕ್ಕಂತಹ ದೆಹಲಿಯ ಸಂದರ್ಶನದಲ್ಲಿ ಈ ವಿಚಾರವನ್ನು, ತಮ್ಮ ಅನಿಸಿಕೆಗಳನ್ನು ಮಾನ್ಯ ಪ್ರಧಾನ ಮಂತ್ರಿಯವರಿಗೆ ತಿಳಿಯಪಡಿಸುತ್ತೇನೆ. ನಿಯೋಗವನ್ನು ಕೊಂಡು ಹೋಗಬೇಕೆಂದು ಹೇಳುತ್ತಿದ್ದೀರಿ. ನಾವೆಲ್ಲಾ ಸಮಾಲೋಚನೆ ಮಾಡಿ ಇದಕ್ಕೆ ಯಾವ ಸಂದರ್ಭದಲ್ಲಿ ಹೇಗೆ ಹೋಗಬೇಕೆಂಬ ಬಗ್ಗೆ ವಿಚಾರ ಮಾಡುತ್ತೇನೆ.